ಟೆಲೆಕ್ಸ್ : 845-2435 ಕೆಇಬಿಇನ್
ಗ್ರಾಂಸ್ : ಕೆಪ್ಟ್ರಾನ್ಸ್

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಕಾರ್ಪೊರೇಟ್ ಆಫೀಸ್,
"ಕಾವೇರಿ ಭವನ"
ಬೆಂಗಳೂರು-560 009

ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06

ದಿನಾಂಕ 11 APR 2008

ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಎಂ.ಆರ್.ಎಸ್. ವಿಭಾಗ,
ಕವಿಪ್ರನಿನಿ,
ಶಿವಮೊಗ್ಗ.

ಮಾನ್ಯರೆ,

ವಿಷಯ: ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ವಿಶ್ರಾಂತಿ ವೇತನ ಯೋಜನೆ ಅನ್ವಯ ನೌಕರರ ಕೊಡುಗೆಯನ್ನು ಆದಾಯ ತೆರಿಗೆಗೆ ಪರಿಗಣಿಸುವ ಬಗ್ಗೆ.

ಉಲ್ಲೇಖ: 1. ನಿಗಮದ ಆದೇಶ ಸಂಖ್ಯೆ:ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ:05.07.2007 ಹಾಗೂ 21.08.2007.
2. ದಿನಾಂಕ: 30.10.2007 ರ ನಿಮ್ಮ ಪತ್ರ.

---

ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ: 05.07.2007 ಹಾಗೂ 21.08.2007 ರ ಅನ್ವಯ ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ವಿಶ್ರಾಂತಿ ವೇತನ ಯೋಜನೆ ಅನ್ವಯ ನೌಕರರ ಕೊಡುಗೆಯನ್ನು ಆದಾಯ ತೆರಿಗೆಯ ಉಳಿತಾಯಕ್ಕೆ ಪರಿಗಣಿಸುವ ಬಗ್ಗೆ ಈ ಕೆಳಗಿನಂತೆ ಸ್ಪಷ್ಟೀಕರಣ ನೀಡಲಾಗಿದೆ.

1. ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80 ಸಿಸಿಡಿ ಪ್ರಕಾರ ನೌಕರರ ಮೂಲ ವೇತನ ಮತ್ತು ತುಟ್ಟಿಭತ್ಯೆಯ ಒಟ್ಟು ಮೊತ್ತದ ಮೇಲೆ ಶೇಕಡ 10 ರಷ್ಟರ ನೌಕರರ ಕೊಡುಗೆಯನ್ನು ಆದಾಯ ತೆರಿಗೆಯನ್ನು ಲೆಕ್ಕ ಹಾಕುವಾಗ ನೌಕರರ ಒಟ್ಟು ಆದಾಯದಿಂದ ಕಳೆಯಬೇಕಿರುತ್ತದೆ.

2. ಈ ಯೋಜನೆಗೆ ಸೇರಿದ ಪ್ರತಿ ನೌಕರರ ಮೂಲ ವೇತನ ಮತ್ತು ತುಟ್ಟಿಭತ್ಯೆಯ ಒಟ್ಟು ಮೊತ್ತದ ಮೇಲೆ ಶೇಕಡ 10 ರಷ್ಟಕ್ಕೆ ಸೀಮಿತಗೊಳಿಸಲ್ಪಡುವ ನಿಗಮದ ಕೊಡುಗೆಯನ್ನು ಆದಾಯ ತೆರಿಗೆಯನ್ನು ಲೆಕ್ಕ ಹಾಕುವಾಗ ನೌಕರರಿಗೆ ನೀಡಲಾದ ಸಂಬಳ ಎಂದು ಪರಿಗಣಿಸಿಬೇಕಿರುತ್ತದೆ ಹಾಗೂ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80 ಸಿಸಿಡಿ ಪ್ರಕಾರ ನೌಕರರ ಆದಾಯ ತೆರಿಗೆಯನ್ನು ಲೆಕ್ಕ ಹಾಕುವಾಗ ಈ ಮೊತ್ತವನ್ನು ನೌಕರರ ಒಟ್ಟು ಆದಾಯದಿಂದ ಕಳೆಯಬೇಕಿರುತ್ತದೆ.

3. ಮೇಲಿನಂತೆ ಕ್ರಮಕೈಗೊಳ್ಳುವಾಗ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80 ಸಿಸಿಡಿ ಅಡಿಯಲ್ಲಿನ ಇತರೆ ಷರತ್ತು ಹಾಗೂ ನಿಬಂಧನೆಗಳನ್ನು ಪಾಲಿಸತಕ್ಕದ್ದು.

ತಮ್ಮ ವಿಶ್ವಾಸಿ,

31.3.08

ಪ್ರಧಾನ ವ್ಯವಸ್ಥಾಪಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ)

**ಗೆ:**

1. ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು.
2. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ ಎಸ್ಕಾಂಗಳು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್‌ಗಳು, ಕವಿಪ್ರನಿನಿ/ ಎಸ್ಕಾಂಗಳು.
5. ಎಲ್ಲಾ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ ಎಸ್ಕಾಂಗಳು.
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್‌ಗಳು, ಕವಿಪ್ರನಿನಿ/ ಎಸ್ಕಾಂಗಳು.
7. ಎಲ್ಲಾ ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ ಎಸ್ಕಾಂಗಳು.
8. ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು ಹಾಗೂ ವಿ.ವಿ.ನಿ.ನಿ./ ನಿರ್ದೇಶಕರು (ಹಣಕಾಸು)/ನಿರ್ದೇಶಕರು(ಪ್ರಸರಣ)/ನಿರ್ದೇಶಕರು (ಕಾನೂನು), ಕವಿಪ್ರನಿನಿ/ ನಿರ್ದೇಶಕರು, ಪಿ.ಸಿ.ಕೆ.ಎಲ್.
9. ಆಪ್ತ ಕಾರ್ಯದರ್ಶಿಗಳು, ಪ್ರಧಾನ ವ್ಯವಸ್ಥಾಪಕರು (ಆಡಳಿತ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ), ಕವಿಪ್ರನಿನಿ, ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂಗಳು.
10. ಡಿ.ಜಿ.ಘಟಕ, ಕೆ.ಪಿ.ಸಿ., ಯಲಹಂಕ.
11. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ.
12. ಎಸ್.ಎ.-II ದಾಖಲೆಗಳು.

(120)